<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ</u>

**<u>ಸಿ.ಸಿ. ನಂ. 48 / 2018</u>**

ಸಿಡಬ್ಲ್ಯೂ- **4**
ಪಿಡಬ್ಲ್ಯೂ- **10**

<u>ದಿನಾಂಕಃ **05.02.2026.**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

| | | |
|---|---|---|
| ಸಾಕ್ಷಿಯ ಹೆಸರುಃ | - | ನೀಲಕಂಠಯ್ಯಸ್ವಾಮಿ |
| ತಂದೆಯ ಹೆಸರುಃ | - | ಬಸ್ಸಯ್ಯಸ್ವಾಮಿ |
| ವಯಸ್ಸುಃ | - | **41** ವರ್ಷ |
| ಉದ್ಯೋಗಃ | - | ಸಿ.ಎಂ.ಸಿ ಯಲ್ಲಿ ನೌಕರಿ. |
| ವಾಸಸ್ಥಳಃ | - | ಯಾದಗಿರಿ. |

<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ</u>

ಚಾಸಾ-5 ರವರ ಪರಿಚಯನನಗೆ ಇರುವುದಿಲ್ಲ. ನನ್ನ ಹಾಗೂ ಚಾಸಾ-5 ರವರ ಸಮಕ್ಷಮ ಪೊಲೀಸರು ಜಪ್ತಿಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಜಪ್ತಿಪಂಚನಾಮೆಯಾಗಿರುತ್ತದೆ ಅದನ್ನು ಈಗಾಗಲೇ ನಿಪಿ 12 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 12(ಬಿ)ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಪೋಟೋಗಳನ್ನು ನೋಡಿ ಗುರುತಿಸಿದ್ದು ಹಾಗೂ ಅವುಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ ಸದರಿ ಪೋಟೋಗಳನ್ನು ಈಗಾಗಲೇ ನಿಪಿ 13 ಮತ್ತು 14 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ತಾನು ಸಹಿ ಮಾಡಿದ ಇನ್ನೊಂದು ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಜಪ್ತಿಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ 15 ಎಂದು ಗುರುತಿಸಲಾಗಿರುತ್ತದೆ ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 15(ಬಿ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಎರಡು ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ ಸದರಿ ಪೋಟೋಗಳನ್ನು ನಿಪಿ 16 ಮತ್ತು 17 ಎಂದು ಗುರುತಿಸಲಾಯಿತು. ಸದರಿ ದಾಖಲೆಗಳ ಮೇಲೆ ಸಹಿಗಳನ್ನು ನಾನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

ಪಾಟೀ ಸವಾಲುಃ ಸ.ಸ.ಅ ರವರಿಂದಃ

ದಿನಾಂಕಃ 26.07.2017 ರಂದು ಬೆಳಗ್ಗೆ 6-45 ರಿಂದ 7-45 ಗಂಟೆಯ ವರೇಗೆ ಯಾದಗಿರಿ ನಗರ ಪೊಲೀಸ್ ಠಾಣೆಯಲ್ಲಿ ಆರೋಪಿ ಜಯಶ್ರೀ ರವರ ಕಡೆಯಿಂದ ಒಂದು ಕಬ್ಬಿಣ ರಾಡು, ಒಂದು ಸ್ಕ್ರೂ ಡ್ರೈವ್ ಹಾಗೂ ಒಂದು ಗೊಬ್ಬರದ ಚೀಲವನ್ನು ನನ್ನ ಹಾಗೂ ಚಾಸಾ-5 ರವರ ಸಮಕ್ಷಮ ಪೊಲೀಸರು ಜಪ್ತಿಪಡಿಸಿಕೊಂಡಿದರು ಎಂದರೆ ಸರಿಯಲ್ಲ. ನಿಪಿ 12 ನ್ನು ತಯಾರಿಸುವಾಗ ನಿಪಿ 13 ಮತ್ತು 14 ನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ದಿನಾಂಕಃ 26.07.2017 ರಂದು ಬೆಳಗ್ಗೆ 10 ಗಂಟೆಯಿಂದ 11 ಗಂಟೆಯ ವರೇಗೆ ಕಲಬುರಗಿ ನಗರದ ಆರೋಪಿತಳ ಮನೆಯ ಪಕ್ಕದ ಗೋಡೆಯ ಕೆಳಗಡೆ ಇರುವ ಸ್ಥಳದಲ್ಲಿ ಬಚ್ಚಿಟ್ಟಿದ್ದ ಬಂಗಾರದ ಆಭರಣಗಳನ್ನು ನನ್ನ ಹಾಗೂ ಚಾಸಾ-5 ರವರ ಸಮಕ್ಷಮ ಪೊಲೀಸರು ಜಪ್ತಿಪಡಿಸಿಕೊಂಡಿದರು ಎಂದರೆ ಸರಿಯಲ್ಲ. ನಿಪಿ 15 ನ್ನು ತಯಾರಿಸುವಾಗ ನಿಪಿ 16 ಮತ್ತು 17 ನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ಬಂಗಾರದ ಆಭರಣ ಮತ್ತು ಪದಕಗಳು ಮತ್ತು ಒಂದು ನೀಲಿ ಬಣ್ಣದ ಕೈಚೀಲ ಇವುಗಳನ್ನು ಪೋಲೀಸರು ನಮ್ಮ ಸಮಕ್ಷಮ ಜಪ್ತಿಪಡಿಸಿಕೊಂಡಿದರು ಎಂದರೆ ಸರಿಯಲ್ಲ. ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರು ಸಹ ಜಪ್ತಿಪಂಚನಾಮೆ ಮಾಡಿರುವುದಿಲ್ಲ ಹಾಗೂ ಭಾವಚಿತ್ರಗಳನ್ನು ತೆಗೆದಿರುವುದಿಲ್ಲ ಹಾಗೂ ಬಂಗಾರದ ಆಭರಣಗಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಸ್.ಸಿ.ಎನ್. ರವರಿಂದಃ

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.